ದಿಃ 03.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಎ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಎಂ.ಆರ್.ನಂಬರ್ ಹೆಚ್.11/2016-17 ಅನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ಎಂ.ಆರ್.ನಂಬರ್ ಹೆಚ್.12/2016-17 ಅನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ಜೋಗಣ್ಣನಕೆರೆ ಗ್ರಾಮದ ಸರ್ವೆ ನಂಬರ್ 173 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ಜೋಗಣ್ಣನಕೆರೆ ಗ್ರಾಮದ ಸರ್ವೆ ನಂಬರ್ 173 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ವಂಶವೃಕ್ಷಕ್ಕೆ ಸಲ್ಲಿಸಿದ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ದಿಃ 02.08.2016 ರ ಹಕ್ಕು ಬಿಡುಗಡೆ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 17.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ 1 ನೇ ಪ್ರತಿವಾದಿ ಪರವಾಗಿ

3. ಸರ್ವೆ ನಂಬರ್ 173 ರ ಪೂರ್ಣ ವಿಸ್ತೀರ್ಣ ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಂಬರ್ 173 ರಲ್ಲಿ ಎಷ್ಟು ಜನ ಹಿಡುವಳಿದಾರರು ಇದ್ದಾರೆ ಎಂದು ಹೇಳಲು ಆಗುವುದಿಲ್ಲ. ಸರ್ವೆ ನಂಬರ್ 173 ರ ಯಾವ ದಿಕ್ಕಿನಲ್ಲಿ ದಾವ ಜಮೀನುಗಳು ಬರುತ್ತವೆ ಎಂದು ಹೇಳಲು ಆಗುವುದಿಲ್ಲ. ದಾವ 'ಬಿ' ಶೆಡ್ಯೂಲ್ ಜಮೀನುಗಳು ಪಕ್ಕಾಪೋಡಿ ಆಗಿಲ್ಲ ಎಂದರೆ ಸರಿ. ಸರ್ವೆ ನಂಬರ್ 173 ರಲ್ಲಿ 2 ಎಕರೆ ಜಾಗ ಸಾಗುವಳಿ ಚೀಟಿಯ ಸಂಖ್ಯೆ 6/88-89 ರ ಪ್ರಕಾರ ಸುಬ್ಬಯ್ಯ ಎಂಬುವವರಿಗೆ ಮಂಜೂರಾಗಿದೆ ಎಂದರೆ ಸರಿ. ಸರ್ವೆ ನಂಬರ್ 173 ರಲ್ಲಿ 2 ಎಕರೆ ಜಾಗ ಸಾಗುವಳಿ ಚೀಟಿ ಸಂಖ್ಯೆ 16/88-89 ರಂತೆ ಈ ಮೇಲೆ ಹೇಳಿದ ಸುಬ್ಬಯ್ಯ ಎಂಬುವವರಿಗೆ ಮಂಜೂರಾಗಿದೆ ಎಂದರೆ ಸರಿ. 3 ನೇ ಪ್ರತಿವಾದಿಯ ತಂದೆ ಅಣ್ಣಪ್ಪ ರವರು ಸುಬ್ಬಯ್ಯ ಎಂಬುವವರಿಗೆ ಸಾಗುವಳಿ ಚೀಟಿ ಮೂಲಕ ಮಂಜೂರಾದ ಜಮೀನಿಗೆ ಸಂಬಂಧಿಸಿದಂತೆ ತಕರಾರು ಮಾಡಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡುವ ವಿಚಾರವಾಗಿ ಆ ತಕರಾರನ್ನು 3 ನೇ ಪ್ರತಿವಾದಿಯ ತಂದೆ ಅಣ್ಣಪ್ಪ ಮಾಡಿದ್ದರು ಎಂದರೆ ಸರಿ. ದಿಃ 30.04.2016 ರಂದು ತಹಶೀಲ್ದಾರ್ ರವರು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಬೇಕು ಎಂದು ಆದೇಶ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 30.04.2016 ರಂದು ತಹಶೀಲ್ದಾರ್ ರವರು ಮಾಡಿದ ಆದೇಶದ ಮೇಲೆ ಇದುವರೆಗೂ ಯಾರು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ.

4. ದಿಃ 02.08.2016 ರಂದು 2 ರಿಂದ 4 ನೇ ಪ್ರತಿವಾದಿಗಳು ದಾವ ಬಿ ಶೆಡ್ಯೂಲ್ ನ 1 ಮತ್ತು 2 ನೇ ಐಟಂ ಗೆ ಸಂಬಂಧಿಸಿದಂತೆ ಹಕ್ಕು ಖುಲಾಸೆ ಪತ್ರವನ್ನು 1 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿ 2 ರಿಂದ 4 ನೇ ಪ್ರತಿವಾದಿಗಳು ನಮ್ಮ ಬಳಿ ತಮಗೆ ಗೊತ್ತಿಲ್ಲದೇ ಬರೆದುಕೊಟ್ಟಿದ್ದೇವೆ

ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. 2 ರಿಂದ 4 ನೇ ಪ್ರತಿವಾದಿಗಳು ನಿಮಗೆ ತಮಗೆ ತಿಳಿಯದೆಯೇ ಹಕ್ಕು ಕುಲಾಸೆ ಪತ್ರವನ್ನು ಬರೆದುಕೊಟ್ಟಿದ್ದೇವೆ ಎಂದು ಯಾವಾಗ ತಿಳಿಸಿದ್ದರು ಎಂದರೆ ಸಾಕ್ಷಿ ಅವರು ನಮಗೆ ಆ ವಿಚಾರವನ್ನು ಹೇಳಿಲ್ಲ ಎಂದು ನುಡಿಯುತ್ತಾರೆ. 2 ರಿಂದ 4 ನೇ ಪ್ರತಿವಾದಿಗಳು ತಮಗೆ ತಿಳಿಯದೆಯೇ 1 ನೇ ಪ್ರತಿವಾದಿಗೆ ದಾವ 'ಬಿ' ಶೆಡ್ಯೂಲ್ ಐಟಂ ನಂಬರ್ 1 ಮತ್ತು 2 ಕ್ಕೆ ಸಂಬಂಧಿಸಿದಂತೆ ಹಕ್ಕು ಖುಲಾಸೆ ಬರೆದುಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಗಳು ತಮಗೆ ತಿಳಿಯದೆಯೇ 1 ನೇ ಪ್ರತಿವಾದಿಗೆ ದಾವ 'ಬಿ' ಶೆಡ್ಯೂಲ್ ಐಟಂ ನಂಬರ್ 1 ಮತ್ತು 2 ಕ್ಕೆ ಸಂಬಂಧಿಸಿದಂತೆ ಹಕ್ಕು ಖುಲಾಸೆ ಬರೆದುಕೊಟ್ಟಿದ್ದರು ಎಂದು ನನಗೆ ಹೇಳಿದ್ದರು ಎಂಬ ವಿಚಾರವನ್ನು ವಾದ ಪತ್ರದಲ್ಲಿ ನಾನು ಹೇಳಿಲ್ಲ.

5. ಸರ್ವೆ ನಂಬರ್ 173 ರಲ್ಲಿ 2 ಎಕರೆ 20 ಗುಂಟೆ ಜಮೀನು ಸುಬ್ಬಯ್ಯ ರವರಿಗೆ ಸಾಗುವಳಿ ಚೀಟಿ ಸಂಖ್ಯೆ 102/82-83 ರಂತೆ ಮಂಜೂರಾಗಿತ್ತು ಎಂದರೆ ಸರಿ. ಆ 2 ಎಕರೆ 20 ಗುಂಟೆ ಜಮೀನು ಸುಬ್ಬಯ್ಯ ರವರು ತೀರಿಕೊಂಡ ಬಳಿಕ ಆತನ ಹೆಂಡತಿ ಸಿದ್ದಮ್ಮ ರವರ ಹೆಸರಿಗೆ ಖಾತೆ ಆಗಿತ್ತು ಎಂದರೆ ಸರಿ. ಸಿದ್ದಮ್ಮ ರವರು ತೀರಿಕೊಂಡ ಬಳಿಕ ಸಿದ್ದಮ್ಮ ರವರ ಮಕ್ಕಳ ನಡುವೆ ಆದ ಒಪ್ಪಂದ ಪ್ರಕಾರ 1, 2 ಮತ್ತು 4 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿದ್ದವು ಎಂದರೆ ಸಾಕ್ಷಿ ಆ ರೀತಿ ಯಾವುದೇ ಒಪ್ಪಂದ ಆಗಿಲ್ಲ ಎಂದು ನುಡಿಯುತ್ತಾರೆ. 1, 2 ಮತ್ತು 4 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಮ್ಯುಟೇಷನ್ ಪ್ರತಿಯನ್ನು ನಾನು ನೋಡಿರುತ್ತೇನೆ. ಆ ಮ್ಯುಟೇಷನ್ ಸಂಖ್ಯೆ ಎಂ.ಆರ್.ಹೆಚ್.45/2019-20 ಆಗಿರುತ್ತದೆ ಎಂದರೆ ಸರಿ. ದಿಃ 02.08.2016 ರಂದು ಆಗಿರುವ ಹಕ್ಕು ಖುಲಾಸೆ ಪತ್ರವನ್ನು ಪ್ರಶ್ನೆ ಮಾಡುವ ಹಕ್ಕು ನಮಗೆ ಇಲ್ಲ ಎಂದರೆ ಸಾಕ್ಷಿ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿ ಆಗಿರುವುದರಿಂದ ನಮಗೆ ಹಕ್ಕು ಇದೆ ಎಂದು ನುಡಿಯುತ್ತಾರೆ.

6. 2 ರಿಂದ 4 ನೇ ವಾದಿಯರ ಜನ್ಮ ದಿನಾಂಕವನ್ನು ತೋರಿಸುವ ದಾಖಲೆಯನ್ನು

ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. 2 ರಿಂದ 4 ನೇ ವಾದಿಯರು 2000 ಇಸವಿಗೂ ಮೊದಲು ಜನಿಸಿದ್ದರು ಎಂದರೆ ಸರಿ. 4 ಮತ್ತು 5 ನೇ ವಾದಿಯರ ಜನನ ದಿನಾಂಕವನ್ನು ಹೇಳಲು ಆಗುವುದಿಲ್ಲ. 4 ಮತ್ತು 5 ನೇ ವಾದಿಯರು ಅವಳಿ ಜವಳಿ ಅಲ್ಲ ಎಂದರೆ ಸರಿಯಲ್ಲ. 4 ಮತ್ತು 5 ನೇ ವಾದಿಯರು ಅವಳಿ ಜವಳಿ ಅಲ್ಲ ಎಂದು ಒಪ್ಪಿಕೊಂಡರೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಅವರು ಅವಳಿ ಜವಳಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 5 ನೇ ವಾದಿಯರ ವಯಸ್ಸನ್ನು ತಪ್ಪಾಗಿ ನಮೂದಿಸಿ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

7. ನಮಗೆ ಬಿ ಶೆಡ್ಯೂಲ್ ಆಸ್ತಿಯ ಮೇಲೆ ಯಾವುದೇ ಹಕ್ಕು ಇರದೇ ಇದ್ದರು ಸುಳ್ಳು ದಾಖಲೆಗಳನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 27.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ 1 ನೇ ಪ್ರತಿವಾದಿ ಪರವಾಗಿ

8. ಈ ದಾವೆಯನ್ನು ದಾಖಲಿಸಲು ವಕೀಲರಿಗೆ ಮಾಹಿಯನ್ನು ನಾನೇ ನೀಡಿದ್ದೆ, ಮಾಹಿತಿ ನೀಡಿದ ದಿನಾಂಕ ನೆನಪಿಲ್ಲ. ದಾವೆಯಲ್ಲಿ ಹೇಳಿರುವ ಎ ವಂಶವೃಕ್ಷವನ್ನು ಈ ದಾವೆಗಾಗಿ ಸೃಷ್ಟಿಸಿ ಹೇಳಿದ್ದೇನೆ ಎಂದರೆ ಸರಿಯಲ್ಲ. 2022 ರಲ್ಲಿ ಹಕ್ಕು ಬಿಡುಗಡೆ ಆದ ವಿಚಾರ ತಿಳಿದಿತ್ತು. ವಿಚಾರ ತಿಳಿದ ಬಳಿಕ ನಾವು ಅದನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳಲಿಲ್ಲ, ಜೆ.ಸಿ.ಬಿ ಬಂದ ಬಳಿಕ ನಮಗೆ ವಿಚಾರ ತಿಳಿಯಿತು. ಜೆ.ಸಿ.ಬಿ ಬಂದ ಬಳಿಕ ಹಕ್ಕು ಬಿಡುಗಡೆ ಪತ್ರ ಆದ ದಾಖಲೆಯನ್ನು ನಾನು ಪಡೆದುಕೊಂಡಿದ್ದೇನೆ. ಜೆ.ಸಿ.ಬಿ ಬಂದ ಬಳಿಕ ಪೊಲೀಸರಿಗೆ ದೂರನ್ನು ನೀಡಲು ಪ್ರಯತ್ನಿಸಿದ್ದೆವು. ಪೊಲೀಸರಿಗೆ ದೂರನ್ನು ನೀಡಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಜೆ.ಸಿ.ಬಿ ಬಂದ ಬಳಿಕ ನಮಗೆ ಹಕ್ಕು ಬಿಡುಗಡೆ ಪತ್ರದ ವಿಚಾರ ತಿಳಿಯಿತು, ಆ ಬಗ್ಗೆ ಪೊಲೀಸರಿಗೆ ದೂರನ್ನು ನೀಡಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಈ ದಾವೆಯಲ್ಲಿ ನಾನು ಮತ್ತು ಇತರೆ ವಾದಿಗಳು ಅವಿಭಕ್ತ ಕುಟುಂಬದ ಸದಸ್ಯರು ಎಂದು ಸುಳ್ಳು ಹೇಳಿದ್ದೇವೆ ಎಂದರೆ ಸರಿಯಲ್ಲ. ದಾವ ಬಿ ಶೆಡ್ಯೂಲ್ ಸ್ವತ್ತುಗಳು ವಾದಿಗಳಾದ ನಮ್ಮ ಮತ್ತು ಪ್ರತಿವಾದಿಗಳ ಅವಿಭಕ್ತ ಕುಟುಂಬದ ಸ್ವತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಬಿ ಶೆಡ್ಯೂಲ್ ಸ್ವತ್ತುಗಳನ್ನು ಸುಬ್ಬಯ್ಯ ರವರ ನಂತರ ನಾವು ವಾರಸು ಮೂಲಕ ಪಡೆದುಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ದಾಖಲಿಸಲು ದಿಃ 07.02.2022 ರ ವ್ಯಾಜ್ಯ ಕಾರಣವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸೃಷ್ಟಿಸಿದ ವ್ಯಾಜ್ಯ ಕಾರಣದ ಆಧಾರದ ಮೇಲೆ ದಾವೆಯನ್ನು ದಾಖಲಿಸಿ ಸುಳ್ಳು ಪ್ರತಿಪಾದನೆ

ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸೇರಿದ ಸ್ವತ್ತುಗಳನ್ನು ಹೊಡೆದುಕೊಳ್ಳಲು ಸುಳ್ಳು ದಾವೆಯನ್ನು ತಂದಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ